ಶ್ರೀ ಡಿ. ಟಿ. ಜಯಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಇದು ಹಿಂದೆ ಆಗಿರುವಂತಹ ನೇಮಕಾತಿಯಾಗಿದೆ. ಈಗ ರೋಸ್ಟರ್ ಸಿಸ್ಟಂ ಪ್ರಕಾರ ಮಾಡಬೇಕೆಂದು ಇದೆ. ಆದುದರಿಂದ ಇತ್ತೀಚೆಗೆ ಎಲ್ಲಾ ರೊಸ್ಟರ್ ಪ್ರಕಾರ ಮಾಡಲಾಗುತ್ತಿದೆ.

ಉಡುಪಿಯಲ್ಲಿ ಜಿಲ್ಲಾ ಸಹಕಾರಿ ಬ್ಯಾಂಕ್

182 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಸಹಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲಾ ಸಹಕಾರ ಬ್ಯಾಂಕನ್ನು ಎಂದು ಪ್ರಾರಂಭಿಸಲಾಗುವುದು?

ಆ) ನಿರ್ದೇಶಕರನ್ನು ಆಯ್ಕೆ ಮಾಡಲು ಯಾವ ಮಾರ್ಗಸೂಚಿಗಳನ್ನು ಅನುಸರಿಸಲಾಗುವುದು?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕನ್ನು 1959ರ ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯ ಕಲಂ 14ರ ಪ್ರಕಾರ ವಿಭಜಿಸಿ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಪ್ರತ್ಯೇಕವಾಗಿ ಜಿಲ್ಲಾ ಬ್ಯಾಂಕುಗಳನ್ನು ಸ್ಥಾಪಿಸಿದರೆ ಎರಡೂ ಜಿಲ್ಲಾ ಬ್ಯಾಂಕುಗಳು ಆರ್ಥಿಕವಾಗಿ ಶಕ್ತವಾಗಿರುವುದೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಇದಕ್ಕಾಗಿ ಹಿರಿಯ ಅಧಿಕಾರಿಗಳ ಸಮಿತಿಯೊಂದನನ್ನು ರಚಿಸಲಾಗುತ್ತಿದೆ. ಹಾಗೂ ವಿಭಜನೆ ವಿಷಯವನ್ನು ಸರ್ಕಾರವು ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ನಬಾರ್ಡ್ ಇವುಗಳೊಂದಿಗೆ ವ್ಯವಹರಿಸಿದ್ದು, ಮಾರ್ಗಸೂಚಿ ಪ್ರಕಾರ ರಿಸರ್ವ್ ಬ್ಯಾಂಕ್‌ನ ಅನುಮತಿಯನ್ನು ಪಡೆದು, ಹೊಸದಾಗಿ ವಿಭಜನೆ ಮತ್ತು ರಚನೆಗಳನ್ನು ಮಾಡ ಬಹುದಾಗಿರುತ್ತದೆ. ರಿಸರ್ವ್ ಬ್ಯಾಂಕ್ ವಿಧಿಸುವ ಆರ್ಥಿಕ ಸಬಲತೆಯ ಮಾನದಂಡವನ್ನು ಅನ್ವಯಿಸಿ ವಿಭಜನೆ ಪ್ರಸ್ತಾವನೆಯನ್ನು ಪರಿಶೀಲಿಸಿ, ಶೀಘ್ರದಲ್ಲೇ ತೀರ್ಮಾನವನ್ನು ಕೈಗೊಂಡು ಕ್ರಮ ಕೈಗೊಳ್ಳಲಾಗುವುದು.

ಆ) ಬ್ಯಾಂಕಿನ ವಿಭಜನೆಯ ಪ್ರಸ್ತಾವನೆಯನ್ನು ಪರಿಶೀಲಿಸಿ ಪ್ರತ್ಯೇಕವಾಗಿ ಎರಡು ಬ್ಯಾಂಕುಗಳ ರಚನೆಯ ಬಗ್ಗೆ ತೀರ್ಮಾನವನ್ನು ಕೈಗೊಂಡ ನಂತರ ನಿರ್ದೇಶಕ ಮಂಡಳಿ ರಚನೆ ಬಗ್ಗೆ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ ಅನ್ವಯ ಆಡಳಿತ ಮಂಡಳಿಯನ್ನು ರಚಿಸಲು ಕ್ರಮವಿಡಲಾಗುವುದು.

ಶ್ರೀ ಡಿ. ಆರ್. ಪಾಟೀಲ್ (ಗದಗ) : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಕೊಟ್ಟಿರುವಂತಹ ಉತ್ತರದಲ್ಲಿ ರಿಸರ್ವ್ ಬ್ಯಾಂಕ್‌ನ ಪರ್ಮಿಷನ್ ತೆಗೆದುಕೊಂಡು ನಾವು ವಿಭಜನೆ ಮಾಡುತ್ತೇವೆಂದು ಹೇಳಿದ್ದಾರೆ. ಆ ವಿಭಜನೆ ಮಾಡಿದಾಗ ಈಗ ಇರುವ ಕಾನೂನು ಪ್ರಕಾರ ಹೊಸ ಡೈರಕ್ಟರ್ ಮಂಡಳಿಯನ್ನು ರಚಿಸುತ್ತೇವೆಂದು ಹೇಳಿದ್ದಾರೆ. ಈಗ ಜಿಲ್ಲಾ ಪಂಚಾಯತ್ ವಿಭಜನೆಯಾದಾಗ ಚುನಾಯಿತ ಸದಸ್ಯರು ಆ ಪ್ರದೇಶದಲ್ಲಿ ಯಾರು ಬರುತ್ತಾರೆ, ಅವರನ್ನೇ ಸದಸ್ಯರನ್ನಾಗಿ ಮಾಡುತ್ತೀರಾ? ಈಗ ಜಿಲ್ಲಾ ಪಂಚಾಯತ್‌ಗೆ ಸದಸ್ಯರನ್ನು ನೇಮಕ ಮಾಡುವ ವಿಚಾರದಲ್ಲಿ ತಿದ್ದುಪಡಿಯನ್ನು ತಂದಿರುವ ರೀತಿಯಲ್ಲೇ ಸಹಕಾರಿ ಕಾನೂನಿಗೂ ಅದೇ ರೀತಿಯಲ್ಲಿ ತಿದ್ದುಪಡಿಯನ್ನು ತಂದು

ಈಗಾಗಲೇ ಚುನಾಯಿತರಾದಂತಹ ಡೈರಕ್ಟರರೇ ಆ ಮಂಡಳಿಯ ಡೈರಕ್ಟರ್ ಆಗಿ ಇರುವ ಹಾಗೆ ಮಾಡುತ್ತೀರಾ ಎಂಬುದು ನನ್ನ ಮೊದಲನೆಯ ಪ್ರಶ್ನೆಯಾಗಿದೆ. ಎರಡನೆಯದಾಗಿ, ವಿಭಜನೆಯಾಗುವವರೆಗೆ ಈಗ ಇರುವ ಡಿ ಸಿ ಸಿ ಬ್ಯಾಂಕ್‌ಗೆ ಹೊಸ ನೇಮೂಣೆಕೆಯಾಗದ ರೀತಿಯಲ್ಲಿ ತಾವು ನೋಡಿಕೊಳ್ಳುತ್ತೀರಾ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಪಂಚಾಯತ್ ರಾಜ್ ಕಾನೂನು ಬೇರೆ, ಸಹಕಾರ ಕಾನೂನೇ ಬೇರೆಯಾಗುತ್ತದೆ. ಸಹಕಾರಿ ಕಾನೂನಿನಡಿಯಲ್ಲಿ ಏನು ಇದೆ, ಆ ರೀತಿಯಲ್ಲಿ ಮಾಡುತ್ತೇವೆ. ಮಾನ್ಯ ಸದಸ್ಯರು ಇದಕ್ಕೆ ತಿದ್ದುಪಡಿ ತರುತ್ತೀರಾ ಎಂದು ಕೇಳಿದ್ದಾರೆ. ನಾವು ಸದನದಲ್ಲಿ ತಿದ್ದುಪಡಿಯನ್ನು ಮಂಡಿಸಿದ್ದೇವೆ. ಆ ತಿದ್ದುಪಡಿ ಮಂಜೂರಾದರೆ ಅದರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ಅಲ್ಲಿಯವರೆಗೆ ನೇಮಕಗಳನ್ನು ನಿಲ್ಲಿಸುತ್ತೀರಾ ಎಂದು ಕೇಳಿದ್ದಾರೆ, ಅದನ್ನು ನಾವು ನಿಲ್ಲಿಸುವುದಕ್ಕಾಗುವುದಿಲ್ಲ. ಅಲ್ಲಿ ಅವಶ್ಯಕವಾದಂತಹ ಸಿಬ್ಬಂದಿಗಳನ್ನು ನಾವು ಕೊಡಬೇಕಾಗುತ್ತದೆ. ಆದುದರಿಂದ ನಿಲ್ಲಿಸುವಂತಹ ಪರಿಸ್ಥಿತಿ ಉದ್ಭವವಾಗುವುದಿಲ್ಲ.

ವಿಟ್ಲದಿಂದ ಬೆಂಗಳೂರಿಗೆ ಅಲ್ಟ್ರಾ ಡೀಲಕ್ಸ್ ಬಸ್ ಸೇವೆಗಳು

183 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿಟ್ಲದಿಂದ ಬೆಂಗಳೂರಿಗೆ ರಾತ್ರಿ ವೇಳೆ ಒಂದು ಅಲ್ಟ್ರಾ ಡೀಲಕ್ಸ್ ಬಸ್ಸು ಸರ್ವಿಸ್ ಪ್ರಾರಂಭಿಸುವ ಅಗತ್ಯದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಇದನ್ನು ಯಾವಾಗ ಪ್ರಾರಂಭಿಸಲಾಗುವುದು?*

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಇಲ್ಲಾ.

ಆ) ಉದ್ಭವಿಸುವುದಿಲ್ಲ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಉಪಾಧ್ಯಕ್ಷರೆ, ನಾನು ಮೂರು ಸಾರಿಯಿಂದಲೂ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ನನಗೆ ಪ್ರತಿಸಾರಿಯೂ ನೆಗೆಟೀವ್ ಉತ್ತರವೇ ಬರುತ್ತದೆ, ಪಾಸಿಟೀವ್ ಉತ್ತರ ಬರುತ್ತಾ ಇಲ್ಲ. ನಾನು ಏನು ದೊಡ್ಡ ಪ್ರಶ್ನೆಯನ್ನು ಕೇಳಿಲ್ಲ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ವಿಟ್ಲದಿಂದ ಬೆಂಗಳೂರಿಗೆ ಒಂದು ಸೂಪರ್ ಡೀಲಕ್ಸ್ ಬಸ್ಸನ್ನು ಪ್ರಾರಂಭ ಮಾಡಬೇಕೆಂದು ಕೇಳಿದ್ದೇನೆ. ಇದರ ಬಗ್ಗೆ ಸರಿಯಾದಂತಹ ಉತ್ತರವನ್ನು ತಾವು ಕೊಟ್ಟಿಲ್ಲ. ನಮ್ಮ ಕ್ಷೇತ್ರ ಕೇರಳ ಮತ್ತು ಕರ್ನಾಟಕ ರಾಜ್ಯದ ಗಡಿ ಪ್ರದೇಶವಾಗಿದೆ. ನಾವು ಬಸ್ಸಿಗೆ ಬರಬೇಕೆಂದರೆ ಮಂಗಳೂರು ಅಥವಾ ಪುತ್ತೂರಿಗೆ ಹೋಗಬೇಕು. ಅದರ ಮಧ್ಯದಲ್ಲಿ ವಿಟ್ಲ ಕ್ಷೇತ್ರವಿದೆ. ಅದಕ್ಕಾಗಿ ಅನಿವಾರ್ಯವಾಗಿ ಮತ್ತು ಅಗತ್ಯವಾಗಿ ವಿಟ್ಲದಿಂದ ಒಂದು ಬಸ್ಸು ಪ್ರಾರಂಭ ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.